ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]

Company Identity Number[CIN]: -

ಕಂಪನಿ ಕಾರ್ಯಾಲಯ,

ನವನಗರ, ಹುಬ್ಬಳ್ಳಿ- 580 025.

Telephone No.: 0836-2223867
0836-2223865

HUBLI ELECTRICITY SUPPLY COMPANY LIMITED

[Wholly owned Govt. of Karnataka undertaking]

: - U04010KA2002PLC030437

Company Office,

Navanagar, Hubli-580 025.

Web Site: www.hescom.co.in
E-mail ID: gmadmhr.hescom@gmail.com

ಕ್ರಮ ಸಂಖ್ಯೆ: ಹೆಚ್.ಸಿ.ಓ.- 07/ಸಿ.-117/2018-19, ದಿನಾಂಕ: 06 MAR 2019

# ಸುತ್ತೋಲೆ

ವಿಷಯ: ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಅಧಿಕಾರಿ/ ಸಿಬ್ಬಂದಿಗಳನ್ನು ನಿಯೋಜನೆ ಆಧಾರದಲ್ಲಿ ಆದೇಶಿಸಿದಾಗ, ಸದರಿಯವರ ಸೇವಾ ಪುಸ್ತಕ, ಪಿಂಚಣಿ, ಉಪದಾನ, ಎನ್.ಡಿ.ಸಿ.ಪಿ.ಎಸ್. ವಂತಿಕೆ, ಸೌಲಭ್ಯಗಳು ಮತ್ತು ಹು.ವಿ.ಸ.ಕಂ.ನಿ.ಗೆ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ಎನ್.ಡಿ.ಸಿ.ಪಿ.ಎಸ್. ಕುರಿತು.

ಉಲ್ಲೇಖ:
1. ಕ.ವಿ.ಪ್ರ.ನಿ.ನಿ./ ಹು.ವಿ.ಸ.ಕಂ.ನಿ. ಯ ಬಿ.ಇ.ಎಸ್.ಆರ್. ನಿಯಮಾವಳಿಗಳು.
2. ಕ.ವಿ.ಪ್ರ.ನಿ.ನಿ. ಆದೇಶ ಸಂಖ್ಯೆ: KPTCL/ SA-3/ 1598/ 2006-07, ದಿನಾಂಕ: 05.04.2014.
3. ಇಂಧನ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇ.ಎನ್. 20 ಇ.ಇ.ಬಿ. 2016, ಬೆಂಗಳೂರು, ದಿನಾಂಕ: 21.03.2016.
4. ಹು.ವಿ.ಸ.ಕಂ.ನಿ.ಯ ಅಧಿಕೃತ ಜ್ಞಾಪನ ಸಂಖ್ಯೆ: ಹುವಿಸಕಂನಿ/ ಆಂನಿ/ ಎನ್.ಪಿ.ಎಸ್./ 2018-19/16983-85, ದಿನಾಂಕ: 02.11.2018.

******

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ನೇಮಕಗೊಂಡಿರುವ ಅಧಿಕಾರಿ / ಸಿಬ್ಬಂದಿಗಳನ್ನು ಹು.ವಿ.ಸ.ಕಂ.ನಿ. ಕಾರ್ಯ ವ್ಯಾಪ್ತಿಯಿಂದ ಹೊರಗೆ ಕೇಂದ್ರ / ರಾಜ್ಯ ಸರ್ಕಾರ / ಅರೆ-ಸರ್ಕಾರಿ / ನಿಗಮ / ಕ.ವಿ.ಪ್ರ.ನಿ.ನಿ. / ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು / ಮಂಡಳಿಗಳಿಗೆ ನಿಯೋಜಿಸಿ ಆದೇಶಿಸಲ್ಪಟ್ಟಿರುವವರನ್ನು, ಕ.ವಿ.ಪ್ರ.ನಿ.ನಿ. / ಹು.ವಿ.ಸ.ಕಂ.ನಿ.ಯ ಬಿ.ಇ.ಎಸ್.ಆರ್. ನಿಯಮಾವಳಿಗಳು ಮತ್ತು ಕ.ವಿ.ಪ್ರ.ನಿ.ನಿ. ಆದೇಶ ಸಂಖ್ಯೆ: KPTCL / SA-3/ 1598/ 2006-07, ದಿನಾಂಕ: 05.04.2014 ರಲ್ಲಿರುವ ಷರತ್ತು ಮತ್ತು ನಿಬಂಧನೆಗೊಳಪಟ್ಟು ನಿಯೋಜನೆಗಳನ್ನು ಕೈಗೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಕೇಂದ್ರ / ರಾಜ್ಯ ಸರ್ಕಾರ / ಅರೆ-ಸರ್ಕಾರಿ / ನಿಗಮ / ಕ.ವಿ.ಪ್ರ.ನಿ.ನಿ. / ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು / ಮಂಡಳಿಗಳಿಂದ ಅಧಿಕಾರಿ / ಸಿಬ್ಬಂದಿಗಳನ್ನು ನಿಯೋಜನೆ ಮೇರೆಗೆ ಸೇವೆಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇಂತಹ ಪ್ರಕಣಗಳಲ್ಲಿ ಹು.ವಿ.ಸ.ಕಂ.ನಿ. ಕಂಪನಿ ಮಟ್ಟದಲ್ಲಿ ಕೇಂದ್ರಿಯವಾಗಿ, ಕೈಗೊಳ್ಳಬೇಕಾಗುವ ಈ ಕೆಳ ಕಾಣಿಸಿದ ಕ್ರಮಗಳನ್ನು ಕ್ರಮಬದ್ಧವಾಗಿ ನಿರ್ವಹಿಸುವಂತೆ ಆದೇಶಿಸಲು ನಿರ್ದೇಶಿತನಾಗಿರುತ್ತೇನೆ.

**A.** ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ನೇಮಕಗೊಂಡು, ಹು.ವಿ.ಸ.ಕಂ.ನಿ. ಕಾರ್ಯ ವ್ಯಾಪ್ತಿಯಿಂದ ಹೊರಗೆ ಕೇಂದ್ರ / ರಾಜ್ಯ ಸರ್ಕಾರ / ಅರೆ-ಸರ್ಕಾರಿ / ನಿಗಮ / ಕ.ವಿ.ಪ್ರ.ನಿ.ನಿ. / ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು / ಮಂಡಳಿಗಳಿಗೆ ನಿಯೋಜಿಸಿರುವ ಅಧಿಕಾರಿ/ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ, ಕೇಂದ್ರಿಯವಾಗಿ ಹು.ವಿ.ಸ.ಕಂ.ನಿ. ಕಂಪನಿ ಕಾರ್ಯಾಲಯದ ಮಟ್ಟದಲ್ಲಿ, ಈ ಕೆಳ ಕಾಣಿಸಿದ ಕ್ರಮಗಳನ್ನು ಕೈಗೊಳ್ಳುವುದು;

**1.** ಹು.ವಿ.ಸ.ಕಂ.ನಿ. ಕಾರ್ಯ ವ್ಯಾಪ್ತಿಯಿಂದ ಹೊರಗೆ ಕೇಂದ್ರ / ರಾಜ್ಯ ಸರ್ಕಾರ / ಅರೆ-ಸರ್ಕಾರಿ / ನಿಗಮ / ಕ.ವಿ.ಪ್ರ.ನಿ.ನಿ. / ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು / ಮಂಡಳಿಗಳಿಗೆ ನಿಯೋಜನೆ ಆಧಾರದ ಮೇರೆಗೆ ಇರುವ ಅಧಿಕಾರಿ / ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಹು.ವಿ.ಸ.ಕಂ.ನಿ.ಯ ಕಂಪನಿ ಕಾರ್ಯಾಲಯದ ಆಂತರಿಕ ನಿರ್ವಹಣೆ ಶಾಖೆಯಲ್ಲಿ ನಿಯಮಾವಳಿಗಳನುಸಾರ ನಿರ್ವಹಿಸುವುದು.

[ಪು.ತಿ.ನೋ.]

2. ಕಾಲ ಕಾಲಕ್ಕೆ ಸದರಿ ಅಧಿಕಾರಿ / ಸಿಬ್ಬಂದಿಗಳ ವೇತನ / ವಾರ್ಷಿಕ ವೇತನ ಬಡ್ತಿ / ಇತರೆ ಸೌಲಭ್ಯಗಳ ಮಂಜೂರಾತಿಯ ಕ್ರಮಗಳನ್ನು ಹು.ವಿ.ಸ.ಕಂ.ನಿ.ಯ ಕಂಪನಿ ಕಾರ್ಯಾಲಯದ ಆಂತರಿಕ ನಿರ್ವಹಣೆ ಶಾಖೆಯಲ್ಲಿ ನಿಯಮಾವಳಿಗಳನುಸಾರ ನಿರ್ವಹಿಸುವುದು.

3. ಕಾಲ ಕಾಲಕ್ಕೆ ಸದರಿ ಅಧಿಕಾರಿ / ಸಿಬ್ಬಂದಿಗಳ ವಿವಿಧ ರಜೆ ಮಂಜೂರಾತಿಯ ಕ್ರಮಗಳನ್ನು ಹು.ವಿ.ಸ.ಕಂ.ನಿ.ಯ ಕಂಪನಿ ಕಾರ್ಯಾಲಯದ ಆಂತರಿಕ ನಿರ್ವಹಣೆ ಶಾಖೆಯಲ್ಲಿ ನಿಯಮಾವಳಿಗಳನುಸಾರ ನಿರ್ವಹಿಸುವುದು.

4. ಕಾಲ ಕಾಲಕ್ಕೆ ಕ.ವಿ.ಪ್ರ.ನಿ.ನಿ. / ಹು.ವಿ.ಸ.ಕಂ.ನಿ.ಯಿಂದ ನಿಗದಿಪಡಿಸಲಾಗುವ ಪಿಂಚಣಿ, ಉಪದಾನ, ಎನ್.ಡಿ.ಸಿ.ಪಿ.ಎಸ್./ ವಿವಿಧ ವಂತಿಕೆಗಳಿಗೆ ಸಂಬಂಧಿಸಿದಂತೆ, ಆಯಾ ಕೇಂದ್ರ / ರಾಜ್ಯ ಸರ್ಕಾರ / ಅರೆ-ಸರ್ಕಾರಿ / ನಿಗಮ / ಕ.ವಿ.ಪ್ರ.ನಿ.ನಿ. / ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು / ಮಂಡಳಿಗಳಿಗೆ ನಿಯಮಾವಳಿಗಳನುಸಾರ ಆಯಾ ವಿವಿಧ ವಂತಿಕೆವಾರು ಮಾಸಿಕ ಅಥವಾ ನಿಗದಿ ಪಡಿಸಿರುವಂತೆ, ಬೇಡಿಕೆಗಳನ್ನು ಕಳುಹಿಸಿ, ವಂತಿಕೆಗಳ ಮೊತ್ತವನ್ನು ಪಡೆದ ನಂತರ, ಹು.ವಿ.ಸ.ಕಂ.ನಿ. ಕಂಪನಿ ಕಾರ್ಯಾಲಯದ ಅಧಿಕಾರಿ / ಸಿಬ್ಬಂದಿಗಳ ಆಯಾ ವಂತಿಕೆಗಳಿಗೆ ಕೈಗೊಳ್ಳುವ ಕ್ರಮಗಳಂತೆಯೇ, ಹು.ವಿ.ಸ.ಕಂ.ನಿ.ಯ ಕಂಪನಿ ಕಾರ್ಯಾಲಯದ ಆಂತರಿಕ ನಿರ್ವಹಣೆ ಶಾಖೆಯಲ್ಲಿ ನಿಯಮಾವಳಿಗಳನುಸಾರ ನಿರ್ವಹಿಸುವುದು.

5. ಕಾಲ ಕಾಲಕ್ಕೆ ಹು.ವಿ.ಸ.ಕಂ.ನಿ.ಯ ಕಂಪನಿ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಯತಕಾಲಿಕ ಅಧಿಕಾರಿ / ಸಿಬ್ಬಂದಿಗಳ ವೇತನ ನಿಗದಿ / ವಂತಿಕೆ / ಸೌಲಭ್ಯಗಳು ಮತ್ತು ಇನ್ನಿತರೆ ಸೌಲಭ್ಯ [Establishment Matters] ಗಳಿಗೆ ಸಂಬಂಧಿಸಿದಂತೆ ಕೈಗೊಳ್ಳುವ ಎಲ್ಲಾ ಕ್ರಮಗಳನ್ನು ಸಕಾಲದಲ್ಲಿ ನಿರ್ವಹಿಸುತ್ತಿರುವಂತೆಯೇ, ಕೇಂದ್ರ / ರಾಜ್ಯ ಸರ್ಕಾರ / ಅರೆ-ಸರ್ಕಾರಿ / ನಿಗಮ / ಕ.ವಿ.ಪ್ರ.ನಿ.ನಿ. / ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು / ಮಂಡಳಿಗಳಿಗೆ ನಿಯೋಜನೆ ಮೇರೆಗೆ ಇರುವ ಅಧಿಕಾರಿ / ಸಿಬ್ಬಂದಿಗಳಿಗೆ ಸಂಬಂಧಿಸಿದ ಕ್ರಮಗಳನ್ನು ನಿಯಮಾವಳಿಗಳನುಸಾರ ಸಕಾಲದಲ್ಲಿ ಕೈಗೊಳ್ಳಲು ಹು.ವಿ.ಸ.ಕಂ.ನಿ.ಯ ಕಂಪನಿ ಕಾರ್ಯಾಲಯ, ಆಂತರಿಕ ನಿರ್ವಹಣೆ ಶಾಖೆಯಲ್ಲಿ ನಿರ್ವಹಿಸುವುದು.

**B.** ಕೇಂದ್ರ / ರಾಜ್ಯ ಸರ್ಕಾರ / ಅರೆ-ಸರ್ಕಾರಿ / ನಿಗಮ / ಕ.ವಿ.ಪ್ರ.ನಿ.ನಿ. / ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು / ಮಂಡಳಿಗಳಿಂದ ಅಧಿಕಾರಿ / ಸಿಬ್ಬಂದಿಗಳನ್ನು ನಿಯೋಜನೆ ಮೇರೆಗೆ ತೆಗೆದುಕೊಳ್ಳಲಾಗುತ್ತಿದೆ. ಇದರಲ್ಲಿ ಪ್ರಮುಖವಾಗಿ, ಹು.ವಿ.ಸ.ಕಂ.ನಿ.ಯ ಜಾಗೃತದಳದಲ್ಲಿ ಪೊಲೀಸ್ ಇಲಾಖೆಯಿಂದ ನಿಯೋಜನೆ ಮೇರೆಗೆ ಅಧಿಕಾರಿ / ಸಿಬ್ಬಂದಿಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಇಂತಹ ಅಧಿಕಾರಿ / ಸಿಬ್ಬಂದಿಗಳ ಎನ್.ಡಿ.ಸಿ.ಪಿ.ಎಸ್. ವಂತಿಕೆಗಳಿಗೆ ಸಂಬಂಧಿಸಿದಂತೆ, ಹು.ವಿ.ಸ.ಕಂ.ನಿ. ಕಂಪನಿ ಮಟ್ಟದಲ್ಲಿ ಕೇಂದ್ರಿಯವಾಗಿ, ಈ ಕೆಳ ಕಾಣಿಸಿದ ಕ್ರಮಗಳನ್ನು ಕೈಗೊಳ್ಳುವುದು;

1. ಹು.ವಿ.ಸ.ಕಂ.ನಿ.ಯ ಜಾಗೃತದಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳ ಎನ್.ಡಿ.ಸಿ.ಪಿ.ಎಸ್. ವಂತಿಕೆಯ ವಿವರಣಾ ಪಟ್ಟಿಯನ್ನು ನಿಯಮಾವಳಿಗಳನುಸಾರ ಆಯಾ ಅಧಿಕಾರಿ / ಸಿಬ್ಬಂದಿಗಳ **PRAN** [Permanent Retirement Account Number] ಗಳೊಂದಿಗೆ ತಯಾರಿಸಿ, ಆಯಾ ಲೆಕ್ಕ ಘಟಕದ ವೇತನ ಬಟವಾಡೆ ಮಾಡುವ ಪ್ರಾಧಿಕಾರಿಗಳು-'ಲೆಕ್ಕಾಧಿಕಾರಿ, ಜಾಗೃತದಳ, ಪೊಲೀಸ್ ಅಧೀಕ್ಷಕರವರ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿರವರಿಗೆ ಆಯಾ ತಿಂಗಳ ತಖ್ತೆಯನ್ನು, ಅದೇ ತಿಂಗಳ 22ನೇ ತಾರೀಕಿನೊಳಗಾಗಿ ಕಳುಹಿಸುವುದು.

2. ಎನ್.ಡಿ.ಸಿ.ಪಿ.ಎಸ್. ವಂತಿಕೆಯ ವಿವರಣಾ ಪಟ್ಟಿಯನ್ನು ಕ್ರೋಢೀಕರಿಸುವಾಗ, ಆಯಾ ಅಧಿಕಾರಿ/ ಸಿಬ್ಬಂದಿಗಳ **PRAN** [Permanent Retirement Account Number] ಯನ್ನು ಕಡ್ಡಾಯವಾಗಿ ನಮೂದಿಸುವುದು.

3. ಸದರಿ ಎನ್.ಡಿ.ಸಿ.ಪಿ.ಎಸ್. ವಂತಿಕೆಯ ವಿವರಣಾ ಪಟ್ಟಿಯನ್ನು ನಿಯಮಾವಳಿಗಳನುಸಾರ ಆಯಾ ಲೆಕ್ಕ ಘಟಕಗಳಿಂದ ಪಡೆದು, ಕ್ರೋಢೀಕರಿಸಲು ಲೆಕ್ಕಾಧಿಕಾರಿ, ಜಾಗೃತದಳ, ಪೊಲೀಸ್ ಅಧೀಕ್ಷಕರವರ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಗೆ ಸೂಚಿಸಿದೆ.

4. ಸದರಿ ಕ್ರೋಢೀಕರಿಸಿದ ವಿವರಣಾ ಪಟ್ಟಿಯನ್ನು ಕಂಪನಿ ಕಾರ್ಯಲಯದ ಆಂತರಿಕ ನಿರ್ವಹಣೆ ಶಾಖೆಗೆ ನಿಯಮಿತವಾಗಿ ಆಯಾ ತಿಂಗಳ ತಖ್ತೆಯನ್ನು ಅದೇ ತಿಂಗಳ 23ನೇ ತಾರೀಕಿನೊಳಗಾಗಿ ಕಳುಹಿಸುವುದು.

[ಪು.ತಿ.ನೋ.]

5. ಪೊಲೀಸ್ ಇಲಾಖೆಯ ಅಧಿಕಾರಿ/ಸಿಬ್ಬಂದಿ ಗಳು ತಮ್ಮ PRAN ಸಂಖ್ಯೆಯನ್ನು ಉಪಯೋಗಿಸಿಕಂಡು ತಮ್ಮ ಹಾಗೂ ಉದ್ಯೋಗದಾತನ ವಂತಿಕೆಯನ್ನು ಪಾವತಿಸಲು ಲೆಕ್ಕಾಧಿಕಾರಿ(ಆಂತರಿಕ ನಿರ್ವಹಣೆ), ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರಿಗೆ ಒಪ್ಪಿಗೆ ಪತ್ರವನ್ನು ಬರೆದು ಕೊಡತಕ್ಕದ್ದು.

6. ಎಲ್ಲಾ ವೇತನ ಬಟವಾಡೆ ಅಧಿಕಾರಿಗಳು ಪ್ರಥಮ ಬಾರಿಗೆ ಅಧಿಕಾರಿ/ನೌಕರರ ವಂತಿಗೆ ತಖ್ತೆಯನ್ನು ಸಲ್ಲಿಸುವಾಗ ಮೇಲೆ ತಿಳಿಸಿರುವ ಒಪ್ಪಿಗೆ ಪತ್ರವನ್ನು ಪಡೆದು PRAN ಸಂಖ್ಯೆ ಸರಿಯಾಗಿ ಇರುವ ಬಗ್ಗೆ ದೃಡಿಕರಣದೊಂದಿಗೆ ಸಹಮತಿ ಪತ್ರವನ್ನು ಸಲ್ಲಿಸುವುದು.

7. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ಎನ್.ಪಿ.ಎಸ್. ವಂತಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ಉಲ್ಲೇಖ [3] ರಲ್ಲಿರುವ ಆದೇಶ ಸಂಖ್ಯೆ: ಇ.ಎನ್. 20 ಇ.ಇ.ಬಿ. 2016, ಬೆಂಗಳೂರು, ದಿನಾಂಕ: 21.03.2016 ರಲ್ಲಿ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿಯ ಲೆಕ್ಕಾಧಿಕಾರಿಯನ್ನು Non Treasury Pay & Accounts Officer & DDO Officer ಆಗಿ ನೇಮಕ ಮಾಡಿ ಆದೇಶಿಸಿರುತ್ತಾರೆ.

8. ಸದರಿ ಆದೇಶದನ್ವಯ, ಲೆಕ್ಕಾಧಿಕಾರಿ, ಜಾಗೃತದಳ, ಪೊಲೀಸ್ ಅಧೀಕ್ಷಕರವರ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿರವರಿಂದ ಸ್ವೀಕೃತವಾದ ಕ್ರೋಢೀಕೃತ ವಿವರಣಾ ಪಟ್ಟಿ ಹಾಗೂ ಕಂಪನಿ ಕಾರ್ಯಾಲಯದಲ್ಲಿ ನಿಯೋಜನ ಮೇರೆಗೆ ಇರುವ ಅಧಿಕಾರಿ/ ಸಿಬ್ಬಂದಿಗಳ ಎನ್.ಡಿ.ಸಿ.ಪಿ.ಎಸ್. ವಂತಿಕೆಯ ವಿವರಣಾ ಪಟ್ಟಿಗಳೊಂದಿಗೆ ಕ್ರೋಢೀಕರಿಸಿ, ಕಂಪನಿ ಕಾರ್ಯಲಯದ ಆಂತರಿಕ ನಿರ್ವಹಣೆ ಶಾಖೆಯಲ್ಲಿ, ಸಂಬಂಧಿಸಿರುವ ಇಲಾಖೆಗೆ ಬಟವಾಡೆ ಮಾಡಲು, ಲೆಕ್ಕಾಧಿಕಾರಿ [ಆಂತರಿಕ ನಿರ್ವಹಣೆ], ಹು.ವಿ.ಸ.ಕಂ.ನಿ. ಕಂಪನಿ ಕಾರ್ಯಾಲಯ, ಹುಬ್ಬಳ್ಳಿರವರು Non Treasury Pay & Accounts Officer & DDO Officer ಆಗಿ ನಿಯಮಾವಳಿಗಳನುಸಾರ ಸೂಕ್ತ ಕ್ರಮಗಳನ್ನು ಕೈಗೊಳುವುದು.

9. ಪೊಲೀಸ್ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ಒಪ್ಪಿಗೆ ಪತ್ರವನ್ನು ಆಯಾ ವೇತನ ಬಟವಡೆ ಅಧಿಕಾರಿಗಳಿಂದ ಪಡೆದು ಆಯಾ ಅಧಿಕಾರಿ/ಸಿಬ್ಬಂದಿಗಳ ವಂತಿಕೆಯನ್ನು ಸರಿಯಾಗಿ ಅವರವರ PRAN ಸಂಖ್ಯೆಗೆ ಪಾವತಿಯಾಗಿರುವುದನ್ನು ಖಚಿತ ಪಡೆದುಕೊಳ್ಳವುದು.

ಪ್ರಧಾನ ವ್ಯವಸ್ಥಾಪಕರು
**[ಆಡಳಿತ ಮತ್ತು ಮಾ.ಸಂ.ಅ]**

ಪ್ರತಿ:

1. ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರಕಾರದ ಸಚಿವಾಲಯ, ವಿಕಾಸ ಸೌಧ ಬೆಂಗಳೂರು - ರವರ ಮಾಹಿತಿಗಾಗಿ.
2. ನಿರ್ದೇಶಕರು [ಆ ಮತ್ತು ಮಾ.ಸಂ.], ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಮುಖ್ಯ ಇಂಜಿನೀಯರ್ [ವಿದ್ಯುತ್], ಹುಬ್ಬಳ್ಳಿ/ ಬೆಳಗಾವಿ ವಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ ಬೆಳಗಾವಿ.
4. ಮುಖ್ಯ ಇಂಜಿನೀಯರ್, ಸಂಪರ್ಕ ಮತ್ತು ಕಟ್ಟಡಗಳು [ದಕ್ಷಿಣ], ಲೋಕೋಪಯೋಗಿ ಇಲಾಖೆ, ಬೆಂಗಳೂರು.
5. ಆರ್ಥಿಕ ಸಲೆಹೆಗಾರರು [ಆಂತರಿಕ ಪರಿಶೋಧನೆ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
6. ಪ್ರಧಾನ ವ್ಯವಸ್ಥಾಪಕರು [ತಾಂತ್ರಿಕ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
7. ಪ್ರಧಾನ ವ್ಯವಸ್ಥಾಪಕರು [ಆಡಳಿತ ಮತ್ತು ಮಾ.ಸಂ.ಅ.], ಕಂಪನಿ ಕಾರ್ಯಾಲಯ, ಬೆ.ವಿ.ಸ.ಕಂ.ನಿ./ ಮಂ.ವಿ.ಸ.ಕಂ.ನಿ.,/ ಗು.ವಿ.ಸ.ಕಂ.ನಿ./ ಚಾ.ವಿ.ಸ.ನಿ.ನಿ., ಬೆಂಗಳೂರು/ ಮಂಗಳೂರು/ ಕಲಬುರ್ಗಿ/ ಮೈಸೂರು.
8. ಅಧೀಕ್ಷಕ ಇಂಜಿನೀಯರ್ [ವಿದ್ಯುತ್], ಕಾರ್ಯ ಮತ್ತು ಪಾಲನೆ ವೃತ್ತ, ಹುಬ್ಬಳ್ಳಿ/ ಶಿರಸಿ/ ಹಾವೇರಿ/ ಬೆಳಗಾವಿ/ ವಿಜಯಪುರ/ ಬಾಗಲಕೋಟೆ/ ಚಿಕ್ಕೋಡಿ.
9. ಅಧೀಕ್ಷಕ ಇಂಜಿನೀಯರ್ [ವಿದ್ಯುತ್][ಟಿ ಮತ್ತು ಪಿ]/ [ಯೋಜನೆಗಳು], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ.,, ಹುಬ್ಬಳ್ಳಿ.
10. ಅಧೀಕ್ಷಕ ಇಂಜಿನೀಯರ್ [ವಿದ್ಯುತ್] [ಮಾ.ತಂ. ಮತ್ತು ಮಾ.ತ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ.,, ಹುಬ್ಬಳ್ಳಿ – ಮಾಹಿತಿಗಾಗಿ ಹಾಗೂ ಹು.ವಿ.ಸ.ಕಂ.ನಿ. ಅಂತರ್-ಜಾಲದಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳಲು ಕೋರಿದೆ.
11. ಪೊಲೀಸ್ ಅಧೀಕ್ಷಕರು ಜಾಗೃತದಳ, ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
12. ಕಾರ್ಯ ನಿರ್ವಾಹಕ ಇಂಜಿನೀಯರ್ [ವಿದ್ಯುತ್], ಕಾರ್ಯ ಮತ್ತು ಪಾಲನೆ ವಿಭಾಗ, ಹುಬ್ಬಳ್ಳಿ [ನಗರ/ ಗ್ರಾಮೀಣ]/ ಧಾರವಾಡ [ನಗರ/ ಗ್ರಾಮೀಣ]/ ಗದಗ/ ರೋಣ/ ಹಾವೇರಿ/ ರಾಣೇಬೆನ್ನೂರು/ ಶಿರಸಿ/ ಕಾರವಾರ/ ಹೊನ್ನಾವರ/ ದಾಂಡೇಲಿ/ ಬೆಳಗಾವಿ [ನಗರ/ ಗ್ರಾಮೀಣ]/ ಘಟಪ್ರಭಾ/ ಬೈಲಹೊಂಗಲ/ ರಾಮದುರ್ಗ/ ವಿಜಯಪುರ/ ಇಂಡಿ/ ಬಸವನ ಬಾಗೇವಾಡಿ/ ಬಾಗಲಕೋಟೆ/ ಜಮಖಂಡಿ/ ಮುಧೋಳ/ ಚಿಕ್ಕೋಡಿ/ ಅಥಣಿ/ ರಾಯಭಾಗ.

[ಪು.ತಿ.ನೋ.]

13. ಕಾರ್ಯ ನಿರ್ವಾಹಕ ಇಂಜಿನೀಯರ್ [ವಿದ್ಯುತ್] [ಎಮ್.ಟಿ.], ಹುಬ್ಬಳ್ಳಿ/ ಬೆಳಗಾವಿ ವಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ ಬೆಳಗಾವಿ.
14. ಹಿರಿಯ ಆಪ್ತ ಕಾರ್ಯದರ್ಶಿ [ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು [ತಾಂತ್ರಿಕ]], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರ ಮಾಹಿತಿಗಾಗಿ ಮತ್ತು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
15. ಲೆಕ್ಕಾಧಿಕಾರಿ, ಜಾಗೃತದಳ, ಪೊಲೀಸ್ ಅಧೀಕ್ಷಕರವರ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ – ಮಾಹಿತಿಗಾಗಿ ಮತ್ತು ಮೇಲೆ ತಿಳಿಸಿರುವಂತೆ, ಕ್ರಮ ಜರುಗಿಸಲು ಸೂಚಿಸಿದೆ.
16. ಲೆಕ್ಕಾಧಿಕಾರಿ [ಆಂತರಿಕ ನಿರ್ವಹಣೆ], ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ – ಮಾಹಿತಿಗಾಗಿ ಮತ್ತು ಮೇಲೆ ತಿಳಿಸಿರುವಂತೆ, ಕ್ರಮ ಜರುಗಿಸಲು ಸೂಚಿಸಿದೆ.
17. ಲೆಕ್ಕಾಧಿಕಾರಿ [ಆಂತರಿಕ ಪರಿಶೋಧನೆ], ಕಾರ್ಯ ಮತ್ತು ಪಾಲನೆ ವಿಭಾಗ, ಹುಬ್ಬಳ್ಳಿ [ನಗರ/ ಗ್ರಾಮೀಣ]/ ಧಾರವಾಡ [ನಗರ/ ಗ್ರಾಮೀಣ]/ ಗದಗ/ ರೋಣ/ ಹಾವೇರಿ/ ರಾಣೇಬೆನ್ನೂರು/ ಶಿರಸಿ/ ಕಾರವಾರ/ ಹೊನ್ನಾವರ/ ದಾಂಡೇಲಿ/ ಬೆಳಗಾವಿ [ನಗರ/ ಗ್ರಾಮೀಣ]/ ಘಟಪ್ರಭಾ/ ಬೈಲಹೊಂಗಲ/ ರಾಮದುರ್ಗ/ ವಿಜಯಪುರ/ ಇಂಡಿ/ ಬಸವನ ಬಾಗೆವಾಡಿ/ ಬಾಗಲಕೋಟೆ/ ಜಮಖಂಡಿ/ ಮುಧೋಳ/ ಚಿಕ್ಕೋಡಿ/ ಅಥಣಿ/ ರಾಯಭಾಗ.
18. ಮಹಾ ಕಡತ/ ಕಛೇರಿ ಪ್ರತಿ.

# ಒಪ್ಪಿಗೆ ಪತ್ರ

ನಾನು ಶ್ರೀ ______________________________, ಪದನಾಮ : _______________ ______________________________________________ ಶಾಖೆ / ಉಪ ವಿಭಾಗ / ವಿಭಾಗ / ವೃತ್ತ / ಕಂಪನಿ ಕಾರ್ಯಾಲಯ / ಜಾಗೃತ ದಳ ______________________________ ರಲ್ಲಿ ದಿನಾಂಕ: _____________ರಿಂದ ನಿಯೋಜನೆ ಮೇರೆಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ಎಸ್.ಡಿ.ಸಿ.ಪಿ.ಎಸ್. ವಂತಿಕೆಗೆ ಸಂಬಂಧಿಸಿದಂತೆ ನನ್ನ PRAN [Permanent Retirement Account Number] ಸಂಖ್ಯೆ: __________________ ಇರುತ್ತದೆ. ಸದರಿ PRAN ಯನ್ನು ಉಪಯೋಗಿಸಿ, ನನ್ನ ಹಾಗೂ ಉದ್ಯೋಗದಾತನ ವಂತಿಕೆಯನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ಪಾವತಿಸಲು ಲೆಕ್ಕಾಧಿಕಾರಿ [ಆಂತರಿಕ ನಿರ್ವಹಣೆ], ಹು.ವಿ.ಸ.ಕಂ.ನಿ. ಕಂಪನಿ ಕಾರ್ಯಾಲಯ, ಹುಬ್ಬಳ್ಳಿ ರವರಿಗೆ ಒಪ್ಪಿಗೆಯನ್ನು ನೀಡಿರುತ್ತೇನೆ.

ಸಹಿ

ಹೆಸರು : __________________

ಪಿ.ಆರ್.ಎ.ಎನ್. ಸಂಖ್ಯೆ : __________________

ಕಾರ್ಯಸ್ಥಳ : __________________

__________________

__________________

ಈ ಮೇಲಿನ ಪಿ.ಆರ್.ಎ.ಎನ್. ಸಂಖ್ಯೆಯನ್ನು ಪರಿಶೀಲಿಸಿ, ಸರಿ ಇರುವುದನ್ನು ದೃಢೀಕರಿಸಿದೆ.

[ವೇತನ ಬಟವಡೆಮಾಡುವ ಪ್ರಾಧಿಕಾರಿ]
ಲೆಕ್ಕಾಧಿಕಾರಿ/ ಉಪಲೆಕ್ಕನಿಯಂತ್ರಣಾಧಿಕಾರಿ
ಕಾರ್ಯ ಮತ್ತು ಪಾಲನೆ ವಿಭಾಗ/ ವೃತ್ತ/ ವಲಯ,
ಹು.ವಿ.ಸ.ಕಂ.ನಿ., _______________